ಈ) ಹಾಗಿದ್ದಲ್ಲಿ ಈ ಅಂತರವನ್ನು ಎಲ್ಲಾ ಕಡೆ ಒಂದೇ ರೀತಿ ಮಾಡಲಾಗುವುದೇ?
ಉ) ಧಾರವಾಡ ಜಿಲ್ಲೆಯ ಕುಂದಗೋಳ, ನವಲಗುಂದ, ಕಲಘಟಗಿ ಸಿಟಿ ಬಸ್ ಬಿಡದಿರಲು ಕಾರಣವೇನು?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

ನಗರದ ವರ್ಗೀಕರಣಕ್ಕನುಗುಣವಾಗಿ ೨೨ ಕಿ.ಮೀ.ಗಳಿಂದ ೧೨ ಕಿ.ಮೀ.ಗಳವರೆಗೆ ವ್ಯತ್ಯಾಸವಾಗುವುದು.

೨೨ ಕಿ.ಮೀ.ಗಳವರೆಗೆ

ಹೌದು

ಇಲ್ಲ

ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆ ಸರಹದ್ದಿನಿಂದ ೧೨ ಕಿ.ಮೀ.ಗಳವರೆಗಿನ ವ್ಯಾಪ್ತಿಯಲ್ಲಿ ನಗರ ಹೊರವಲಯ ಬಸ್ಸುಗಳನ್ನು ಓಡಿಸಲು ಅವಕಾಶವಿದೆ. ಕುಂದಗೋಳ, ನವಲಗುಂದ ಮತ್ತು ಕಲಘಟಗಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಸರಹದ್ದಿನಿಂದ ಕ್ರಮವಾಗಿ ೧೬.೭, ೩೨.೨ ಮತ್ತು ೨೦.೫ ಕಿ.ಮೀ. ಅಂತರದಲ್ಲಿವೆ. ಹಾಗೆಯೇ ಅವುಗಳು ಧಾರವಾಡ ಮಹಾನಗರ ಸಭೆಯ ಸರಹದ್ದಿನಿಂದ ಕ್ರಮವಾಗಿ ೧೬.೭, ೪೧.೪ ಮತ್ತು ೨೯.೫ ಕಿ.ಮೀ.ಗಳ ಅಂತರದಲ್ಲಿವೆ. ಆದುದರಿಂದ ಸದರಿ ಸ್ಥಳಗಳಿಗೆ ನಗರ ಹೊರವಲಯ ಬಸ್ಸುಗಳನ್ನು ಕಾರ್ಯಾಚರಣೆಗೆ ಒಳಪಡಿಸಲು ಸಮಂಜಸವಲ್ಲ.

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೯:- (೨೮೩)
ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ)
ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೯೧ ಮತ್ತು ೧೯೯೨ರ ಸಾಲಿನಲ್ಲಿ (ಡಿಸೆಂಬರ್ ೧೯೯೨ರ ಅಂತ್ಯದವರೆಗೆ) ಹಂಚಿಕೆ ಮಾಡಿದ ನಿವೇಶನಗಳ ಒಟ್ಟು ಸಂಖ್ಯೆ ಎಷ್ಟು?
ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಆರಂಭಿಕ ಠೇವಣಿಯನ್ನು ಈಗಾಗಲೇ ಸಂದಾಯ ಮಾಡಿರುವವರ ಅರ್ಜಿದಾರರ ಒಟ್ಟು ಸಂಖ್ಯೆ.
ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಇರುವ ಠೇವಣಿ ಹಣವೆಷ್ಟು?
ಈ) ಎಲ್ಲಾ ನಿವೇಶನ ಅರ್ಜಿದಾರರಿಗೆ ನಿವೇಶನ ಹಂಚಲು ಕ್ರಮವನ್ನು ತೆಗೆದು ಕೊಳ್ಳಲಾಗಿದೆಯೇ?
ಉ) ೧೯೯೩ರ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕ ಮಾಡಲು ಉದ್ದೇಶಿಸಿರುವ ಸಂಖ್ಯೆ ಎಷ್ಟು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬಿಡಿ ನಿವೇಶನ ಮತ್ತು ಸಾರ್ವಜನಿಕ ಸೌಲಭ್ಯ ನಿವೇಶನಗಳ ಹಂಚಿಕೆಯನ್ನು ಹೊರತುಪಡಿಸಿ ಇನ್ನಾವುದೇ ನಿವೇಶನಗಳನ್ನು ೧೯೯೦ ರಿಂದ ಹಂಚಿಕೆ ಮಾಡಿರುವುದಿಲ್ಲ. ಅಂದರೆ ೧೯೮೭-೮೮ರ ನಡುವೆ ಹಂಚಿಕೆ ಮಾಡಲ್ಪಟ್ಟ ಪತ್ರಿಕಾ

(ಪೇಪರ್ ಅಲಾಟೀಸ್) ಹಂಚಿಕೆದಾರಿಗೆ ವಿವಿಧ ನಿವೇಶನಗಳ ಸಂಖ್ಯೆ ಮತ್ತು ಬಡಾವಣೆಯನ್ನು ಈ ಕೆಳಕಂಡಂತೆ ಸೂಚಿಸುತ್ತದೆ.

ಮಾಹೆ ಮತ್ತು ವರ್ಷ	ನಿವೇಶನ ಸಂಖ್ಯೆ ಸೂಚಿಸಿರುವುದು.
	೧೯೯೧ ಇಲ್ಲ.
ಜುಲೈ	೧೯೯೨ ೧೧೧೩ ನಿವೇಶನಗಳು
	೪೬.೯೪೪ ಅರ್ಜಿದಾರರು
	೨೭.೫೪ ಕೋಟಿ ರೂಪಾಯಿಗಳು.
	-ಇಲ್ಲ-

೧೯೯೩ರ ಸಾಲಿನಲ್ಲಿ ೫೦೦-೧೦೦೦ ಎಕರೆವರೆಗಾದರೂ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಈ ಮಿತಿಯೊಳಗಿನ ಜಮೀನು ಸ್ವಾಧೀನಪಡಿಸಿಕೊಂಡಲ್ಲಿ, ಸುಮಾರು ೫೦೦೦ ನಿವೇಶನಗಳನ್ನು ಎತರಿಸಲು ಈ ವರ್ಷ ಸಾಧ್ಯವಾಗುತ್ತದೆ.

ವಿಷಯ:- ಜನವರಿ ೧೯೯೨ ರಿಂದ ಬಿ.ಟಿ.ಎಸ್. ಬಸ್ಸುಗಳ ಸಂಖ್ಯೆಯಲ್ಲಿ ಹೆಚ್ಚಳ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೦:- (೨೮೨)

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿಸೆಂಬರ್, ೯೨ರ ಅಂತ್ಯದೊಳಗೆ ಬೆಂಗಳೂರು ನಗರ ಸಾರಿಗೆಯಲ್ಲಿ ಚಾಲನೆಯಲ್ಲಿದ್ದ ವಾಹನಗಳ ಸಂಖ್ಯೆ ಎಷ್ಟು?

ಆ) ಜನವರಿ, ೯೨ ರಿಂದ ಡಿಸೆಂಬರ್, ೯೨ರ ವರೆಗೆ ಬೆಂಗಳೂರು ನಗರ ಸಾರಿಗೆಗೆ ಒದಗಿಸಿದ ಹೊಸ ವಾಹನಗಳೆಷ್ಟು?

ಇ) ಈ ವಾಹನಗಳಲ್ಲಿ ಪ್ರತಿನಿತ್ಯ ಪ್ರಯಾಣಿಸುವ ಪ್ರಯಾಣಿಕರ ಸರಾಸರಿ ಸಂಖ್ಯೆ ಎಷ್ಟು?

ಈ) ಬೆಂಗಳೂರು ನಗರಕ್ಕೆ ಬೇಕಾಗಬಹುದಾದ ವಾಹನಗಳ ಅಂದಾಜು ಎಷ್ಟು?

ಉ) ೧೯೯೩-೯೪ನೇ ಸಾರಿಗೆ ಬೆಂಗಳೂರು ನಗರ ಸಾರಿಗೆಗೆ ಎಷ್ಟು ಬಸ್ಸುಗಳನ್ನು ಸೇರಿಸಲು ಯೋಜಿಸಿದೆ?

ಊ) ಲಾಭದಾಯಕವಲ್ಲದ ಮಾರ್ಗಗಳನ್ನು ಖಾಸಗೀಯವರಿಗೆ ಕೊಡಲು ಉದ್ದೇಶಿಸಲಾಗಿದೆಯೇ?

ಶ್ರೀ ಭೀಮಣ್ಣ ಖಂಡ್ರೆ
(ಸಾರಿಗೆ ಸಚಿವರು)

೧೫೮೦ ವಾಹನಗಳು (ಅನುಸೂಚಿಗಳು)
೧೪೪ ವಾಹನಗಳು (ಅನುಸೂಚಿಗಳು)
ಸುಮಾರು ೧೮.೬೫ ಲಕ್ಷಗಳು.
ಸುಮಾರು ೨೦೦೦ ವಾಹನಗಳು (ಅನುಸೂಚಿಗಳು)
೧೧೧ ವಾಹನಗಳು (ಅನುಸೂಚಿಗಳು)
ಇಲ್ಲ.